1	2	3
129.	ಗುತ್ತಿ	02
130.	-3	03
131.	ಖಂಡಾಳಾ	02
132.	ಗೌರ್	12
133.	ಯದಲಾಪುರ್	04
134.	ಜಾನಾಪುರ್	06
135.	ಧನ್ನುರಾವಾಡಿ	01
136.	ಧನ್ನುರಾ (ಕೆ)	06
137.	ಮುಸ್ತಾಪೂರ್	02
138.	ನಿಂಬಾಪೂರ್	03
139.	ಕೌದಪೂರ್	03
140.	ಮುಚಲಾಂಬ	14
141.	ಗೊರ್ಟಾ (ಬಿ)	08
142.	ತೋಗಲೂರ್	04
143.	ಹಾಲಹಳ್ಳಿ	04
144.	ಗಡಿರಾಯಪಳ್ಳಿ	04
145.	ಕೊಹಿನೂರ್	05
146.	ವಡ್ಡರಗಾ	02
147.	ಭೋಸ್ಗಾ	07

ಭಾಗ್ಯ ಜ್ಯೋತಿ ಯೋಜನೆ

4501 - ಶ್ರೀ ನಾರಾಯಣಸ್ವಾಮಿ ಎ. (ಆನೇಕಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *1998-99, 1999-2000ನೇ ಸಾಲಿನಲ್ಲಿ ಗ್ರಾಮೀಣ ಕಡು ಬಡವರಿಗಾಗಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾದ ಮನೆಗಳ ಸಂಖ್ಯೆ ಎಷ್ಟು ?*

ಆ) *ಈ ರೀತಿ ಕಲ್ಪಿಸಲಾದ ವಿದ್ಯುತ್ ಸಂಪರ್ಕಕ್ಕೆ ಮೀಟರ್ ಅಳವಡಿಸಲಾಗಿದೆಯೇ ಅಥವಾ ಉಚಿತವಾಗಿ ಸಂಪರ್ಕ ಕಲ್ಪಿಸಲಾಗಿದೆಯೇ ?*

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) 1998-99ನೇ ಸಾಲಿನಲ್ಲಿ 1,40,763 ಮತ್ತು 1999-2000ನೇ ಸಾಲಿನಲ್ಲಿ 1,48,391 ಮನೆಗಳಿಗೆ ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ನೀಡಲಾಗಿದೆ.

ಆ) ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಸ್ಥಾವರಗಳಿಗೆ ಪ್ರಸ್ತುತ ಮೀಟರ್ ಅಳವಡಿಸಲಾಗುತ್ತಿಲ್ಲ. ಆದರೆ ಪ್ರತಿ ಸ್ಥಾವರಕ್ಕೆ ಪ್ರತಿ ತಿಂಗಳು ರೂ. 2.50ಯಂತೆ ವಿದ್ಯುತ್ ಶುಲ್ಕವನ್ನು ವಿಧಿಸಲಾಗುತ್ತಿದೆ.

ಕೊಳ್ಳೇಗಾಲ ತಾಲ್ಲೂಕಿನ ಮಧುವನಹಳ್ಳಿಯಲ್ಲಿ ವಿದ್ಯುತ್ ಉಪಕೇಂದ್ರ ಸ್ಥಾಪನೆ

4502 - ಶ್ರೀ ನಂಜುಂಡಸ್ವಾಮಿ ಜಿ.ಎಸ್. (ಕೊಳ್ಳೇಗಾಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕಿನ ಮಧುವನ ಹಳ್ಳಿಯಲ್ಲಿ 220 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಮತ್ತು ಆ) ಹೌದು, ಇದೆ, ಈ ಪ್ರಸ್ತಾವನೆಯನ್ನು ತಾಂತ್ರಿಕವಾಗಿ ಪರಿಶೀಲಿಸಿ ಅನುಮೋದನೆ ನೀಡಲಾಗಿದೆ. ಈ ವಿಷಯವು ಇನ್ನೂ ಪ್ರಾರಂಭಿಕ ಹಂತದಲ್ಲಿದೆ.

ಇ) ಈ ಉದ್ದೇಶಿತ ವಿದ್ಯುತ್ ಸಬ್-ಸ್ಟೇಷನ್ನಿನ ನಿರ್ಮಾಣಕ್ಕೆ ಬೇಕಾಗುವ ಸೂಕ್ತ ಭೂಮಿಯನ್ನು ಗುರುತಿಸಲಾಗುತ್ತಿದೆ.

ಅರೆ ನೀರಾವರಿ ಪ್ರದೇಶದ ಬಗ್ಗೆ

4503 - ಶ್ರೀ ನಂಜುಂಡಸ್ವಾಮಿ ಜಿ.ಎಸ್. (ಕೊಳ್ಳೇಗಾಲ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳು ನೀರಾವರಿ ಪ್ರದೇಶವಾಗಿದ್ದರೂ ಅರೆ ನೀರಾವರಿ ಪ್ರದೇಶವೆಂದು ಯಾವ ಆಧಾರದ ಮೇಲೆ ಘೋಷಿಸಲಾಗಿದೆ?

ಆ) ಅರೆ ನೀರಾವರಿ ಪ್ರದೇಶವೆಂದು ಘೋಷಿಸಿರುವುದರಿಂದ ರೈತರು ಹೆಚ್ಚು ತೆರಿಗೆ ಭಾರದಿಂದ ಸಂಕಷ್ಟಕ್ಕೆ ಸಿಕ್ಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ರೈತರ ಈ ಸಂಕಷ್ಟವನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?